MVC No.169/2022

ಆರ್.ಡಬ್ಲ್ಯೂ.2

ದಿನಾಂಕಃ 28-10-2025.

ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಮಾನ್ಯ ಶ್ರೀ RND ವಕೀಲರಿಂದ ಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ಅಧಿಕಾರ ಪತ್ರವನ್ನು ನಿ.ಆರ್.1, ವಾಹನ ಸಂಖ್ಯೆ KA-50-9500 ಇದರ ವಿಮಾ ಪಾಲಿಸಿಯ ಪ್ರತಿಯನ್ನು ನಿಆರ್.2 MVC No.132/2022 ರಲ್ಲಿ ಅಗಿರುವ ತೀರ್ಪಿನ ಪ್ರತಿಯನ್ನು ನಿ.ಆರ್. 3 ಎಂದು, ನಿ.ಆರ್.3 ರಲ್ಲಿರುವ ಆಗಿರುವ ಅವಾರ್ಡನ್ನು ನಿ ಆರ್.3(ಎ) ಎಂದು ಗುರುತಿಸಲಾದವು. ಪ್ರಸ್ತುತ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ಅರ್ಜಿದಾರರ ಪರ ಶ್ರೀ ಮಾನ್ಯ MNP ವಕೀಲರಿಂದ:**

3. ಸಾಕ್ಷಿಗೆ ಈಗ ಸದರಿ ಅಪಘಾತವು ಕೇವಲ ಟ್ಯಾಂಕರ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ಸದರಿ ಟ್ಯಾಂಕರ ಹಾಗೂ ಆಟೋ ಚಾಲಕರ ತಪ್ಪಿನಿಂದ ಆಗಿರುತ್ತದೆ ಎಂದು ಹೇಳುತ್ತಾರೆ. ಅಂತಿಮ ವರದಿಯನ್ನು ಪೊಲೀಸರು ಸದರಿ ಟ್ಯಾಂಕರ ಚಾಲಕನ ಮೇಲೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಆದ್ದರಿಂದ ನಾವು ಅರ್ಜಿದಾರರಿಗೆ ಪರಿಹಾರದ ಹಣವನ್ನು ಕೂಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವಾದ ದಿನದಂದು ಸದರಿ ಟ್ಯಾಂಕರ ನ ವಿಮಾ ಚಾಲ್ತಿಯಲ್ಲಿತ್ತು ಎಂದರೆ ಸರಿ. ಆದರೆ 1 ನೇ ಎದುರುದಾರರು ವಿಮಾ ಪಾಲಿಸಿಯ ಷರತ್ತುಗಳನ್ನು ಉಲ್ಲಂಘಿಸಿದ್ದರಿಂದ ನಾವು ಅರ್ಜಿದಾರರಿಗೆ ಯಾವುದೇ ಪರಿಹಾರದ ಹಣವನ್ನು ಕೊಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ. ಸದರಿ ವಾಹನದ ಎಲ್ಲಾ ದಾಖಲೆಗಳು ಹಾಗೂ ಸದರಿ ಚಾಲಕನ DL ಅಪಘಾತವಾದ ದಿನಾಂಕಕ್ಕಾದಂತೆ ಚಾಲ್ತಿಯಲ್ಲಿದ್ದರೂ ಕೂಡಾ ನಮ್ಮ ಭಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 1 ನೇ ಎದುರುದಾರರ ಪರ ಶ್ರೀ ಮಾನ್ಯ SND ವಕೀಲರಿಂದ:**

3. ಸದರಿ ಟ್ಯಾಂಕರನ ಚಾಲಕ DL ನ್ನು ಹೊಂದಿರುತ್ತಾರೆ ಎಂದರೆ ಸರಿ. 1 ನೇ ಎದುರುದಾರರ ದಿಃ 20-09-2018 ರಂದು Transport Endorsement ನ್ನು ಪಡೆದಿರುತ್ತಾರೆ ಎಂರೆ ಸರಿಯಲ್ಲ. ಸಾಕ್ಷಿಯು validity dates ಗಳಲ್ಲಿ ವ್ಯತ್ಯಾಸ ಇರುವುದಾಗಿ ಹೇಳುತ್ತಾರೆ. ಸದರಿ ಪಾಲಿಸಿ ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ೋರಿಸಲು ಸಂಬಂಧಪಟ್ಟ ಅಧಿಕಾರಿಗಳಿಂದ ಯಾವುದೇ endorsement ಪಡೆದುಕೂಂಡಿರುವುದಿಲ್ಲ ಆದರೆ ಅದರ ಬಗ್ಗೆ ಅಂತಿಮ ವರದಿ್ಿ ಲ್ಲಪಿ ನಮೂದಾಗಿರುತ್ತದೆ. ಸದರಿ permit copy ನ್ನು ನಾನು ಪ್ರಸ್ತುತ ಪ್ರಕಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ಟ್ಯಾಂಕರ ವಾಹನ permit ದಿಃ 12-12-2018 ರಿಂದ 11-12-2023 ರವರೆಗೆ valid ಇರುತ್ತದೆ ಎಂದರೆ ಸರಿಯಲ್ಲ. ಸರಿದ ವಾಹನ fitness certificate ನ್ನು ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸದರಿ ಅಪಘಾತವಾದ ದಿನದಂದು ಸದರಿ ಟ್ಯಾಂಕರ ನ ಚಾಲಕ DL ನ್ನು ಹೊಂದಿದದರು ಹಾಗೂ ಸದರಿ ವಾಹನದ permit valid ಇದ್ದರೂ ಕುಡಾ ನಮ್ಮ ಭಾದ್ಯತೆಯಿಂದ ತಪ್ಪಿಸಿಕೂಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ